
# 16-09-2026

# HINDI DIWAS



ಭಾರತವು ವೈವಿಧ್ಯಮಯ ಭಾಷೆಗಳು, ಸಂಸ್ಕೃತಿ ಮತ್ತು ಸಂಪ್ರದಾಯಗಳ ನಾಡಾಗಿದೆ. ಹಿಂದಿ ಭಾಷೆಯು ಉತ್ತಮ ಸಂವಹನ ಕೌಶಲವನ್ನು ಬೆಳೆಸಲು ಸಹಾಯ ಮಾಡುತ್ತದೆ ಎಂದು ಮೈಸೂರಿನ ಪುಷ್ಪ ಹಿಂದಿ ವಿದ್ಯಾಲಯದ ಸಂಸ್ಥಾಪಕರು ಹಾಗೂ ಶ್ರೀ.ಬಸವೇಶ್ವರ ಮಹಾವಿದ್ಯಾಲಯದ ಹಿಂದಿ ಸಹಾಯಕ ಪ್ರಾಧ್ಯಾಪಕರಾದ ಡಾ.ಪುಷ್ಪ ಅವರು ಅಭಿಪ್ರಾಯಪಟ್ಟರು.

ನಗರದ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನಲ್ಲಿ ಐ.ಕ್ಯೂ.ಎ.ಸಿ. ಘಟಕ ಮತ್ತು ಹಿಂದಿ ವಿಭಾಗದ ವತಿಯಿಂದ ದಿನಾಂಕ:೧೬.೦೯.೨೦೨೬ರಂದು ಆಯೋಜಿಸಿದ್ದ **"ಹಿಂದಿ ದಿವಸ್"** ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾತನಾಡುತ್ತಿದ್ದರು. ಭಾರತವು ವೈವಿಧ್ಯಮಯ ಭಾಷೆಗಳು, ಸಂಸ್ಕೃತಿ ಮತ್ತು ಸಂಪ್ರದಾಯಗಳ ನಾಡಾಗಿದೆ. ಹಿಂದಿ ಭಾಷೆಯು ಉತ್ತಮ ಸಂವಹನ ಕೌಶಲವನ್ನು ಬೆಳೆಸಲು ಸಹಾಯ ಮಾಡುತ್ತದೆ. ಪ್ರತಿಯೊಂದು ಭಾಷೆಯೂ ತನ್ನದೆ ಆದ ಮಹತ್ವ ಮತ್ತು ಇತಿಹಾಸವನ್ನು ಹೊಂದಿದೆ. ಹಿಂದಿ ಭಾಷೆಯು ವೈವಿಧ್ಯತೆಯಲ್ಲಿ ಏಕತೆಯನ್ನು ಎತ್ತಿ ತೋರಿಸುತ್ತದೆ ಎಂದ ಅವರು ಹಿಂದಿ ಸಾಹಿತ್ಯ ಕ್ಷೇತ್ರಕ್ಕೆ ತುಳಸೀದಾಸರು, ಸುಭದ್ರಕುಮಾರಿ ಚೌಹಾಣ್ ಹಾಗೂ ಪ್ರೇಮ್ ಚಂದ್ ಇನ್ನು ಮುಂತಾದ ದಿಗ್ಗಜರನ್ನು ಈ ಸಮಯದಲ್ಲಿ ನೆನೆದರು.

ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ಕಾಲೇಜಿನ ಪ್ರಾಂಶುಪಾಲರಾದ ಡಾಎಸ್.ಮರೀಗೌಡರು ತಮ್ಮ ಪ್ರಾಸ್ತಾವಿಕ ನುಡಿಗಳಲ್ಲಿ ಭಾಷೆಗಳು ಜನರ ಮೂಲಕವೇ ಉಳಿದು ಬೆಳೆಯುತ್ತವೆ ಆದ್ದರಿಂದ ಎಲ್ಲರೂ ಎಲ್ಲಾ ಭಾಷೆಯನ್ನು ಕಲಿಯಬೇಕು, ಕಲಿತು ಉತ್ತಮ ಸಂವಹನ ಮಾಡಬೇಕು ಎಂದು ಸಲಹೆ ನೀಡಿದರು. ಹಿಂದಿ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಶ್ರೀಮತಿ.ಶಶಿಕಲಾ.ಹೆಚ್.ಬಿ ಅವರು ಸ್ವಾಗತಿಸಿ, ವಿದ್ಯಾರ್ಥಿಗಳು ನಿರೂಪಿಸಿ, ವಂದಿಸಿದರು.


VIDYAVARDHAKA SANGHA(R). MYSORE
VIDYAVARDHAKA FIRST GRADE COLLEGE
SHESHADRI IYER ROAD, MYSORE
Smt. SHASHIKALA H B
Dr. S MARIGOWDA
Dr. PUSHPA




Smt. SHASHIKALA H B
Dr. S MARIGOWDA
Dr. PUSHPA


HINDI DIWAS



